ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 26 ಚಾ ಸಾ 47

ಹೆಸರುಃ ವಿಷಕಂಠ

ತಂದೆಯ ಹೆಸರುಃ ಗುರು ಮಲ್ಲಯ್ಯ

ವಯಸ್ಸುಃ 60 ವರ್ಷ

ಉದ್ಯೋಗಃ ಹೋಟೆಲ್ ವ್ಯಾಪಾರ

ವಾಸಃ ಕೆ ಆರ್ ಸಾಗರ.

ದಿಃ 05.10.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನನ್ನ ಮನೆ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ಇದೆ . ಈ ಪ್ರಕರಣದ ಸಾಕ್ಷಿದಾರರಾದ ಗಂಗಾರಾಮು ಮತ್ತು ಗಣೇಶ ಗೊತ್ತು. ಅವರ ಮನೆ ನನ್ನ ಮನೆಯಿಂದ ಅರ್ಧ ಕಿ ಮೀ ದೂರದಲ್ಲಿದೆ .

2.ಗಂಗಾರಾಮುವಿನ ಹೆಂಡತಿಯ ಹೆಸರು ಲಕ್ಷ್ಮಿ . ಆ ದಿವಸ ಗಂಗಾರಾಮುವಿನ ಮನೆಯಲ್ಲಿ ಆತನ ಹೆಂಡತಿ

ಲಕ್ಷ್ಮಿ ಮತ್ತು ಆ ಮನೆಯಲ್ಲಿದ್ದ ನಾಲ್ಕು ಜನ ಮಕ್ಕಳು ಸತ್ತಿದ್ದಾರೆ.

3. ಬೆಳಗ್ಗೆ 8-9 ಗಂಟೆಯ ಸಮಯದಲ್ಲಿ ಜನರೆಲ್ಲರೂ ಗಂಗಾರಾಮುವಿನ ಮನೆಯ ಬಳಿ ಹೋಗುತ್ತಿದ್ದರು, ನಾನು ಹೋದೆ . ನಾನು ಹೋಗಿ ನೋಡಿದಾಗ ಆ ಮನೆಯ ಒಂದು ರೂಂ ನಲ್ಲಿ ಲಕ್ಷ್ಮಿ, ಕೋಮಲ್, ಗೋವಿಂದ ಮತ್ತು ಇನ್ನಿಬ್ಬರ ಮಕ್ಕಳ ಶವಗಳಿದ್ದವು.

4. ನಾನು ನೋಡಿದಾಗ ಶವಗಳ ತಲೆ , ಎದೆ ಮುಂತಾದ ಕಡೆಗಳಲ್ಲಿ ಗಾಯಗಳಿದ್ದವು . ಯಾರೋ ಚುಚ್ಚಿ ಚುಚ್ಚಿ ಸಾಯಿಸಿದ ರೀತಿಯಲ್ಲಿ ಕಂಡುಬರುತ್ತಿತ್ತು.

5.ಸ್ಥಳಕ್ಕೆ ಬಂದ ಪೊಲೀಸರು ಐದು ಶವಗಳನ್ನು ಮೈಸೂರಿನ ಕೆ ಆರ್ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದಾರೆ , ನಾನು ಕೂಡ ಅಲ್ಲಿಗೆ ಹೋಗಿದ್ದೇನೆ.

6. ಆಸ್ಪತ್ರೆಯ ಶವಾಗಾರದಲ್ಲಿ ಗೋವಿಂದನ ಶವ ಇದ್ದ ಜಾಗಕ್ಕೆ ಪೊಲೀಸರು ನನ್ನನ್ನು ಕರೆದಿದ್ದಾರೆ , ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ .

7. ಗೋವಿಂದನ ತುಟಿ, ಹಣೆ ಮತ್ತು ತಲೆಯಲ್ಲಿ ಗಾಯಗಳಾಗಿದ್ದವು. ಆ ಶವದ ಮೇಲೆ ನ್ಯಾಯಾಲಯದ ಮುಂದಿರುವ ಮು.ಮಾ 25 ರಿಂದ 27 ರ ಟೀ ಶರ್ಟ್ , ನೈಟ್ ಪ್ಯಾಂಟ್ ಮತ್ತು ಅಂಡರ್ ವೇರ್ ಇತ್ತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ
ಶ್ರೀ ಎಸ್ ಆರ್ ಎಸ್ ವಕೀಲರಿಂದಃ

8. ನಾನು ಹೇಳಿಕೆಯನ್ನು ಕೊಟ್ಟಾಗ ಮದ್ಯಾಹ್ನದ 2.30-3.00 ಗಂಟೆಯಾಗಿತ್ತು.

9. ಆ ದಿವಸ ಶವಗಳನ್ನು ಗಂಗಾರಾಮು ನ ಮನೆಯಲ್ಲಿ ಮೊದಲ ಬಾರಿಗೆ ನೋಡಿದವರು ಯಾರು ಎಂದು ನಾನು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ತಿಳಿಸಿಲ್ಲ. ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ಕೇಳಿ ತಿಳಿದುಕೊಂಡಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)